**ಸಂಖ್ಯೆ**: ಪಿಡಿಎಸ್ 102 ಎಸ್ಎಂಸಿ 2021(ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು,ದಿನಾಂಕ:27.07.2022

# ಅಧಿಸೂಚನೆ

**ವಿಷಯ**: ಆರ್ಥಿಕ ಮತ್ತುಸಾಂಖ್ಯಿಕ ನಿರ್ದೇಶನಾಲಯದ ಕಲ್ಯಾಣ ಕರ್ನಾಟಕ ವೃಂದದ ಉಪ ನಿರ್ದೇಶಕರುಗಳ ದಿನಾಂಕ:01.01.2022 ರಲ್ಲಿದಂತೆ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ**:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 06 ಪಿಎಲ್ಎಕ್ಸ್ 2012, ದಿನಾಂಕ:06.11.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಆರ್ 43 ಹೆಚ್‌ಕೆಸಿ 2013, ದಿನಾಂಕ:29.01.2014.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿ 216 ಎಸ್ಎಸ್ಎಂ 2013, ದಿನಾಂಕ:05.02.2014.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿ 122 ಎಸ್ಎಂಸಿ 2016(ಭಾಗ-1), ದಿನಾಂಕ:28.11.2016.
5. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ಇವರ ಅಧಿಕೃತ ಜ್ಞಾಪನ ಸಂಖ್ಯೆ:ಆಸಾನಿ/55/ಆಡಳಿತ-1/2019-20,
6. ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿಎಸ್ 94 ಎಸ್ಎಂಸಿ 2020, ದಿನಾಂಕ:15.10.2020.
7. ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿಎಸ್ 102 ಎಸ್ಎಂಸಿ 2021, ದಿನಾಂಕ:09.06.2022.

*****

ಭಾರತೀಯ ಸಂವಿಧಾನದ ಅನುಚ್ಛೇದ 371 (ಜೆ) ಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ 3 ಮತ್ತು 13ನೇ ಕಂಡಿಕೆಗಳಿಗೆ ಅನುಸಾರವಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಲ್ಯಾಣ ಕರ್ನಾಟಕ ವೃಂದದ ಉಪ ನಿರ್ದೇಶಕ ವೃಂದದಲ್ಲಿ ಹುದ್ದೆಗಳನ್ನು ಹಂಚಿಕೆ ಮಾಡಿ ಅಧಿಸೂಚಿಸಬೇಕಿದೆ. ಉಲ್ಲೇಖ (2)ರ ಅಧಿಸೂಚನೆಯಲ್ಲಿ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ)ನಿಯಮಗಳು, 2013ರ ನಿಯಮ 6ರ ಉಪ ನಿಯಮ (2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಶಿಷ್ಟಪಡಿಸಿದ ಅಧಿಕಾರಿಗಳನ್ನು ಆಯಾ ವೃಂದಗಳ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಬೇಕಿದ್ದು, ಉಪ ನಿರ್ದೇಶಕ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಯಾವುದೇ ಅಧಿಕಾರಿಗಳು ಸ್ಥಳೀಯ ವೃಂದಕ್ಕೆ ಹಂಚಿಕೆ ಹೊಂದಲು ಇಚ್ಛೆ ವ್ಯಕ್ತಪಡಿಸದ ಕಾರಣ ಈ ವೃಂದದಲ್ಲಿ ಅಧಿಸೂಚನೆಯನ್ನು ಹೊರಿಡಿಸಿರುವುದಿಲ್ಲ.

ಆದರೆ, ಉಲ್ಲೇಖಿತ (3)ರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಗ್ರೂಪ್ 'ಎ' ದರ್ಜೆಯ ಉಪ ನಿರ್ದೇಶಕ ವೃಂದದಲ್ಲಿ ರಾಜ್ಯವ್ಯಾಪಿ ಸ್ಥಳೀಯ ವೃಂದದ ವೃಂದ ಬಲ 39ಕ್ಕೆ

.....2

ಶೇಕಡ 8 ರಂತೆ 3 ಹುದ್ದೆಗಳು ಮತ್ತು ಪ್ರಾದೇಶಿಕ ಮಟ್ಟದ ವೃಂದ ಬಲ 12ಕ್ಕೆ ಶೇಕಡ 75 ರಂತೆ 9 ಹುದ್ದೆಗಳು ಹೀಗೆ ಒಟ್ಟು 12 ಹುದ್ದೆಗಳನ್ನು ಮೀಸಲಿರಿಸಿ ಅಧಿಸೂಚಿಸಲಾಗಿದೆ. ಸಿಆಸುಇ (ಕಲ್ಯಾಣ ಕರ್ನಾಟಕ ವಿಶೇಷ ಕೋಶ) ಇವರ ಅಭಿಪ್ರಾಯದಂತೆ, ಉಲ್ಲೇಖಿತ (3)ರಲ್ಲಿ ಹೊರಡಿಸಿರುವ ಅಧಿಸೂಚನೆಯು ರಾಜ್ಯ ಮಟ್ಟದ ಕಛೇರಿ ಎಂದು ಅರ್ಹತೆ ಹೊಂದಿರುವ ಕಛೇರಿಗಳಿಗೆ 39 ಹುದ್ದೆಗಳು ಲಭ್ಯವಿದ್ದು, ಶೇಕಡ 8 ರಂತೆ 4 ಹುದ್ದೆಗಳನ್ನು ನಿಗದಿಪಡಿಸಬೇಕಾಗಿದ್ದು, ಕೇವಲ 3 ಹುದ್ದೆಗಳನ್ನು ಮೀಸಲಾತಿಗೆ ಒಳಪಡಿಸಿರುವುದು ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 8(3) ರಂತೆ ಕ್ರಮಬದ್ಧವಾಗಿರುವುದಿಲ್ಲವಾದ್ದರಿಂದ, ಉಲ್ಲೇಖ (2)ರ ಅಧಿಸೂಚನೆಯಲ್ಲಿ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ, ಸ್ಥಳೀಯ ವೃಂದಗಳ ರಚನೆ ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013ರ ನಿಯಮ 3(5)ರನ್ವಯ ರಾಜ್ಯ ವ್ಯಾಪಿ ಸ್ಥಳೀಯ ವೃಂದವನ್ನು (ಶೇಕಡ 8 ರಂತೆ ರಾಜ್ಯಮಟ್ಟದ ಮೀಸಲಾತಿಗೊಳಪಡುವ ಹುದ್ದೆಗಳು ಮತ್ತು ಶೇಕಡ 75ರಂತೆ ಪ್ರಾದೇಶಿಕ ಮಟ್ಟದ ಮೀಸಲಾತಿಗೊಳಪಡುವ ಹುದ್ದೆಗಳನ್ನು ಒಗ್ಗೂಡಿಸಿ) ಈ ಅಧಿಸೂಚನೆಯ ಅನುಸೂಚಿ-3ರಲ್ಲಿ ನಮೂದಿಸಿರುವಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶದವರಿಗಾಗಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಹುದ್ದೆಗಳನ್ನು ಉಲ್ಲೇಖಿತ (4) ರಲ್ಲಿರುವಂಥೆ ಮೀಸಲಿರಿಸಿ ಆದೇಶಿಸಲಾಗಿದೆ. ಅದರಂತೆ, ಉಲ್ಲೇಖ (4)ರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಗ್ರೂಪ್ 'ಎ' ದರ್ಜೆಯ ಉಪ ನಿರ್ದೇಶಕ ವೃಂದದಲ್ಲಿ ರಾಜ್ಯವ್ಯಾಪಿ ಸ್ಥಳಿಯ ವೃಂದದ ವೃಂದ ಬಲ 39ಕ್ಕೆ ಶೇಕಡ 8 ರಂತೆ 4 ಹುದ್ದೆಗಳು ಮತ್ತು ಪ್ರಾದೇಶಿಕ ಮಟ್ಟದ ವೃಂದ ಬಲ 12ಕ್ಕೆ ಶೇಕಡ 75 ರಂತೆ 9 ಹುದ್ದೆಗಳು ಹೀಗೆ ಒಟ್ಟು 13 ಹುದ್ದೆಗಳನ್ನು ಮೀಸಲಿರಿಸಿ ಅಧಿಸೂಚಿಸಲಾಗಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಮತ್ತು ಪ್ರಾದೇಶಿಕ ಮಟ್ಟದ ಸ್ಥಳೀಯ ವೃಂದದಲ್ಲಿ ಉಪ ನಿರ್ದೇಶಕ ವೃಂದದ ಕಲ್ಯಾಣ ಕರ್ನಾಟಕ ಪ್ರಾಂತ್ಯದ ಅಧಿಕಾರಿಗಳ ದಿನಾಂಕ:28.07.2014 ರಿಂದ 31.12.2018ರ ಅವಧಿಗೆ ದಿನಾಂಕ:01.01.2019 ರಲ್ಲಿದಂತೆ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಅನುಬಂಧ-1 ರಲ್ಲಿರಿಸಿ ಉಲ್ಲೇಖಿತ (6) ರಲ್ಲಿ ಪ್ರಕಟಿಸಲಾಗಿತ್ತು.

ದಿನಾಂಕ:01.01.2021 ರಿಂದ 01.01.2022ರಲ್ಲಿದ್ದಂತೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:09.06.2022 ರಂದು ಪ್ರಕಟಿಸಲಾಗಿದ್ದು, ಸದರಿ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿರುವ ಜೇಷ್ಠತಾ ವಿಷಯಗಳ ಬಗ್ಗೆ ಆಕ್ಷೇಪಣೆಗಳನ್ನು ಹಾಗೂ ಜೇಷ್ಠತಾ ಪಟ್ಟಿಯಲ್ಲಿ ಅಧಿಕಾರಿಯ ಹೆಸರು, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಮುಂಬಡ್ತಿ ಪಡೆದ ದಿನಾಂಕ ಹಾಗೂ ಅರ್ಹತಾ ದಿನಾಂಕಗಳಲ್ಲಿ ಬೆರಳಚ್ಚು ದೋಷಗಳಿದ್ದಲ್ಲಿ ಅವುಗಳನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು. ಆದರೆ, ನಿಗದಿತ ಕಾಲಮಿತಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ನ್ಯೂನ್ಯತೆಗಳನ್ನು ಸರ್ಕಾರದ ಹಂತದಲ್ಲೇ ಕೂಲಂಕಷವಾಗಿ ಮತ್ತೊಮ್ಮೆ ಪರಿಶೀಲಿಸಿ, ಸರ್ಕಾರಿ ನೌಕರರ ಜೇಷ್ಠತಾ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯಗಳಲ್ಲಿ ಬಾಕಿಯಿರುವ ಮೊಕದ್ದಮೆಗಳಲ್ಲಿನ ತೀರ್ಪುಗಳಿಗೆ ಒಳಪಟ್ಟು ದಿನಾಂಕ:01.01.2021 ಹಾಗೂ 01.01.2022ರಲ್ಲಿದ್ದಂತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಉಪ ನಿರ್ದೇಶಕರ ವೃಂದದ ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ವೃಂದಕ್ಕೆ ನೀಡಲಾದ ಮುಂಬಡ್ತಿ ವಿವರಗಳನ್ನು ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3 ಹಾಗೂ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧ-2ರಲ್ಲಿ ಇದರೊಂದಿಗೆ ಲಗತ್ತಿಸಿ ಪ್ರಕಟಿಸಲಾಗಿದೆ.

.....3

ಅಂತಿಮ ಜೇಷ್ಠತಾ ಪಟ್ಟಿಯನ್ನು ವೆಬ್ ಸೈಟ್:-www.des.karnataka.gov.in ಮತ್ತು www.planning.karnataka.gov.in ನಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

27/7/2022
**(ಪಾಪಣ್ಣ)**
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-1),
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

27/7/2022

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ ಮಾಹಿತಿಗಾಗಿ:**

1. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
2. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರ ಮುಖಾಂತರ).
3. ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆತತ್ಪರಿಣಾಮವಾದಜೇಷ್ಠತೆಯನ್ನು ವಿಸ್ತರಿಸುವಅಧಿನಿಯಮ 2017ರನ್ವಯ ನಿರ್ದೇಶನಾಲಯದಕಲ್ಯಾಣ – ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಭಾರತ ಸಂವಿಧಾನದಅನುಚ್ಛೇದ 371(ಜೆ)ಯನ್ನು ಅನುಷ್ಠಾನಗೊಳಿಸುವ ಸಂಬಂಧ**ದಿನಾಂಕ: 28.07.2014ರಿಂದ ದಿನಾಂಕ: 31.12.2018ರ ಅವಧಿಗೆದಿನಾಂಕ: 01.01.2022**ರಲ್ಲಿದ್ದಂತೆ ರಾಜ್ಯವ್ಯಾಪಿ ಸ್ಥಳೀಯ ವೃಂದದ (ಶೇ.75%+8% ಮೀಸಲಾತಿ) **ಉಪ** ನಿರ್ದೇಶಕರ ವೃಂದದ**ತಾತ್ಕಾಲಿಕ**ಜೇಷ್ಠತಾ ಪಟ್ಟಿಗೆ

ಅನುಬಂಧ–1

| ಕ್ರ.ಸಂ | 01.01.2022 ರಲ್ಲಿದ್ದಂತೆ ಉಪ ನಿರ್ದೇಶಕರವೃಂದದ ಜೇ.ಸಂ. | ಹೆಸರು ಶ್ರೀಮತಿ/ಶ್ರೀ | ಮೀಸಲಾತಿ ವರ್ಗ | ನೇರ ನೇಮಕಾತಿ /ಮುಂಬಡ್ತಿ/ಇತರೆ | ಜನ್ಮ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಉ.ನಿ. ವೃಂದಕ್ಕೆನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಜೇಷ್ಠತೆಗೆ/ ಮುಂಬಡ್ತಿಗೆ ನೈಜವಾದಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | 478 | ಬಸವರಾಜ ಕುಂಬಾರ | ಸಾಮಾನ್ಯ | ಮುಂಬಡ್ತಿ | 04.06.1959 | 21.11.1989 | 28.07.2014 | 28.07.2014 | ನಿವೃತ್ತಿ |

| | | | | | | | | | |
|---|---|---|---|---|---|---|---|---|---|
| 2 | 489 | ಸಿ.ಆರ್.ರಾಮಮೂರ್ತಿ | ಸಾಮಾನ್ಯ | ಮುಂಬಡ್ತಿ | 18.08.1961 | 14.06.1993 | 28.07.2014 | 28.07.2014 | ನಿವೃತ್ತಿ |
| 3 | 493 | ಗೋಪಾಲ ಒಂಟಿ | ಪ.ಜಾ | ಮುಂಬಡ್ತಿ | 23.07.1964 | 27.08.1988 | 28.07.2014 | 28.07.2014 | ನಿಧನ |
| 4 | 508 | ಗಂಗಾಧರ ಎಂ.ಕುಲಕರ್ಣಿ | ಸಾಮಾನ್ಯ | ಮುಂಬಡ್ತಿ | 21.07.1965 | 23.03.1998 | 25.09.2014 | 25.09.2014 | ಸ್ವಯಂ ನಿವೃತ್ತಿ |
| 5 | 509 | ವಾಗೀಶ ಶಿವಾಚಾರ್ಯ | ಸಾಮಾನ್ಯ | ಮುಂಬಡ್ತಿ | 22.08.1973 | 28.03.1998 | 25.09.2014 | 25.09.2014 | ಮುಂಬಡ್ತಿ |
| 6 | 513 | ಡಿ.ಮಂಜುನಾಥ್ | ಪ.ಜಾ | ಮುಂಬಡ್ತಿ | 05.12.1968 | 10.02.2004 | 25.09.2014 | 25.09.2014 | ಮುಂಬಡ್ತಿ |
| 7 | 516 | ಅನ್ನದಾನಸ್ವಾಮಿ ಜಿ.ಎಂ. | ಸಾಮಾನ್ಯ | ಮುಂಬಡ್ತಿ | 01.07.1969 | 23.03.1998 | 03.12.2014 | 03.12.2014 | – |
| 8 | 519 | ಕೃಷ್ಣಮೂರ್ತಿ ಎಸ್ ದೇಸಾಯಿ | ಸಾಮಾನ್ಯ | ಮುಂಬಡ್ತಿ | 29.09.1968 | 24.03.1998 | 03.12.2014 | 03.12.2014 | – |
| 9 | 529 | ಗುರುನಾಥ ಎನ್.ಗೌಡಪ್ಪನವರ | ಸಾಮಾನ್ಯ | ಮುಂಬಡ್ತಿ | 22.07.1964 | 23.03.1998 | 21.10.2015 | 21.10.2015 | – |
| 10 | 539 | ಮಾಧುರಿ ಎಸ್.ತವಗ | ಸಾಮಾನ್ಯ | ಮುಂಬಡ್ತಿ | 31.05.1973 | 20.03.1998 | 21.10.2015 | 21.10.2015 | – |
| 11 | 543 | ಅಂಬರಾಯ ಬಿ.ಸಾಗರ | ಪ.ಜಾ | ಮುಂಬಡ್ತಿ | 22.06.1969 | 23.06.2003 | 21.10.2015 | 21.10.2015 | – |
| 12 | 547 | ಅಶ್ವಿನಿ ಧನರಾಜ್ | ಸಾಮಾನ್ಯ | ಮುಂಬಡ್ತಿ | 29.01.1984 | 05.12.2012 | 18.01.2017 | 18.01.2017 | – |
| 13 | 548 | ಸುವರ್ಣ | ಸಾಮಾನ್ಯ | ಮುಂಬಡ್ತಿ | 05.01.1986 | 05.12.2012 | 18.01.2017 | 18.01.2017 | – |
| 14 | 578 | ಎನ್. ಕೂಡ್ಲಪ್ಪಗೌಡ | ಸಾಮಾನ್ಯ | ಮುಂಬಡ್ತಿ | 25.07.1958 | 18.08.1986 | 30.04.2018 | 30.04.2018 | ನಿವೃತ್ತಿ |
| 15 | 591 | ಬಿ.ಸಿದ್ದಪ್ಪ | ಪ.ಪಂ | - | 01.08.1962 | 30.08.1988 | - | 30.04.2018 | - |
| 16 | 608 | ಡೊಳ್ಳೆಬಾಬುರಾವ್ | ಸಾಮಾನ್ಯ | ಮುಂಬಡ್ತಿ | 10.09.1961 | 26.09.1986 | 30.04.2018 | 30.04.2018 | - |
| 17 | 609 | ಡಿ.ವಿ. ಮಾದಿನೂರ | ಸಾಮಾನ್ಯ | ಮುಂಬಡ್ತಿ | 10.03.1960 | 29.09.1986 | 30.04.2018 | 30.04.2018 | - |

27/7/2022

**(ಪಾಪಣ್ಣ)**
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-1),
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

27/7/2022